ಶಬ್ದವನ್ನಾದರೂ ಕೈಬಿಟ್ಟು ಬಡ ಹಾಗೂ 'ಡಿ' ಮತ್ತು 'ಸಿ' ಗುಂಪಿನ ನೌಕರರಿಗೆ ಅನುಕೂಲ ಮಾಡಲು ಸರ್ಕಾರವು ಮುಂದಾಗುವುದೆ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು) :

ಅ) ಪ್ರವರ್ಗ-1ಕ್ಕೆ ಸಂಬಂಧಿಸಿದಂತೆ ಯಾವುದೇ ಆದಾಯ ಮಿತಿ ಇರುವುದಿಲ್ಲ. ಆದರೆ ಇತರೇ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ" ಕ್ರಿಮಿಲೇಯರತತ್ವ" ವನ್ನು ಅಳವಡಿಸಲಾಗಿದೆ. ಅದು ಈಗಿನ ಆರ್ಥಿಕ ಏರಿಕೆಗೆ ಅನುಗುಣವಾಗಿರುತ್ತದೆ.

ಆ) ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಮೀಸಲಾತಿಯು ಉದ್ಯೋಗದಲ್ಲಿನೇಮಕಾತಿಗೆ ಮಾತ್ರ ಅನ್ವಯವಾಗುತ್ತಿದ್ದು ಆದಾಯ ಮಿತಿಯನ್ನು ರೂ. 1.00 ಲಕ್ಷಕ್ಕೆ ನಿಗಧಿಪಡಿಸಲಾಗಿದೆ. ಇತರ ರಾಜ್ಯಗಳಲ್ಲಿ ಮೀಸಲಾತಿ ಪಡೆಯಲು ನಿಗಧಿಪಡಿಸಿರುವ ಆದಾಯ ಮಿತಿಯ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

ಇ) ಮೀಸಲಾತಿಯ ಅರ್ಹತೆಗೆ ವ್ಯಕ್ತಿಗಳು ಆದಾಯ ತೆರಿಗೆ ನಿರ್ಧರಣೆಗೆ ಒಳಪಟ್ಟಿರುವರೇ ಇಲ್ಲವೇ ಎಂಬುದು ಮಾನದಂಡವೇ ಹೊರತು ವ್ಯಕ್ತಿಗಳ ಸರ್ಕಾರಿ ನೌಕರಿಯ ದರ್ಜೆಯು ಮಾನದಂಡವಾಗಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಯಾವ ಕ್ರಮದ ಅಗತ್ಯ ಇರುವುದಿಲ್ಲ.

ಈ) ಪ್ರಶ್ನೆ (ಇ) ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ನೇಕಾರರ ಸಹಕಾರ ಸಂಘಗಳಿಗೆ (ಎಂ.ಡಿ.ಎ) ಮಾರುಕಟ್ಟೆ ಅಭಿವೃದ್ಧಿ ಯೋಜನೆ

818 - ಶ್ರೀ ಕುಂಭೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95 ಮತ್ತು 1995-96 ನೇ ಸಾಲಿನಲ್ಲಿ ರಾಜ್ಯದಲ್ಲಿನ ನೇಕಾರರ ಸಹಕಾರ ಸಂಘಗಳಿಗೆ ಕೊಡುವ ಎಂ.ಡಿ.ಎ. ಹಣವನ್ನು ಪೂರ್ಣವಾಗಿ ಬಿಡುಗಡೆ ಮಾಡಲಾಗಿದೆಯೇ? ಇಲ್ಲವಾದಲ್ಲಿ ಅದರ ಮೊತ್ತವೆಷ್ಟು? ಹಾಗೂ ಬಿಡುಗಡೆ ಮಾಡದಿರಲು ಕಾರಣವೇನು?

ಆ) ಎಂ.ಡಿ.ಎ. ಹಣವನ್ನು ಸರ್ಕಾರವು ಬಿಡುಗಡೆ ಮಾಡದೇ ಇರುವುದರಿಂದ ಸಹಕಾರ ಸಂಘಗಳು ತೊಂದರೆಗೀಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಇ) ವಿವಿಧ ಕಾರಣಗಳಿಂದ ಕ್ಷೀಣಿಸುತ್ತಿರುವ ನೇಕಾರ ಸಹಕಾರ ಸಂಘಗಳಿಗೆ ಇಂತಹ ತೊಂದರೆಗಳಿಂದ ರಕ್ಷಿಸಲು ಸೂಕ್ತ ಹಾಗೂ ಸಕಾಲಿಕ ಕ್ರಮವನ್ನು ಸರ್ಕಾರದವರು ಜರುಗಿಸುವರೇ?

ಶ್ರೀ ಎಂ.ಎಸ್. ಪಟೇಲ್ (ಜವಳಿ ಸಚಿವರು) :

ಅ) ರಾಜ್ಯ ಸರ್ಕಾರದ ಪಾಲನ್ನು ಪೂರ್ಣ ಬಿಡುಗಡೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಪಾಲಿನ ಹಣ ಇತ್ತೀಚೆಗೆ ಬಂದಿದ್ದು, ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಡಿಸೆಂಬರ್96 ರಲ್ಲಿ ಕೇಂದ್ರ ಸರ್ಕಾರದ ಪಾಲಿನ ಹಣ ಮುಜೂರಾಗಿದ್ದು, ಶೀಘ್ರದಲ್ಲಿ ಅರ್ಹ ಸಹಕಾರ ಸಂಘಗಳಿಗೆ ಹಣ ಬಿಡುಗಡೆ ಮಾಡಲಾಗುವುದು.

ಇ) ಇಂಥ ಸಹಕಾರ ಸಂಘಗಳನ್ನು ಸಶಕ್ತಗೊಳಿಸಲು ಸರ್ಕಾರ ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆ.

ಗಂಗಾ ಕಲ್ಯಾಣ ಯೋಜನೆ.

820 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಎಷ್ಟು ಗಂಗಾ ಕಲ್ಯಾಣ ಯೋಜನೆಯನ್ನು ಕೈಗೊಳ್ಳಲಾಗಿದೆ? (ತಾಲ್ಲೂಕು ವಿವರ ನೀಡುವುದು)

ಶ್ರೀ. ಕೆ.ಎಂ. ಕೃಷ್ಣಾ ರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ತುಮಕೂರು ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಳ್ಳಲಾದ ಯೋಜನೆಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ :-

ಕ್ರ. ಸಂ	ತಾಲ್ಲೂಕು	ಘಟಕ ಗಳ ಸಂಖ್ಯೆ	ಫಲಾನು ಭವಿಗಳ ಸಂಖ್ಯೆ	ಫಲಾನು ಸಫಲ ಬಾವಿಗಳ ಸಂಖ್ಯೆ	ನೀರಿನ ಸೌಲಭ್ಯ ಪಡೆದ ಜಮೀನಿನ ವಿಸ್ತೀರ್ಣ ಎಕರೆ/ ಗುಂಟೆ
1)	ತುಮಕೂರು	7	42	11	75.26
2)	ಶಿರಾ	23	85	30	282.06
3)	ಮಧುಗಿರಿ	11	44	19	132.18
4)	ಚಿಕ್ಕನಾಯಕನಹಳ್ಳಿ	13	46	18	139.07
5)	ಕೊರಟಗೆರೆ	17	71	29	200.14
	ಒಟ್ಟು	**71**	**288**	**107**	**829.31**

ಗದಗ್-ಬೆಟಗೇರಿ ನಗರಕ್ಕೆ ಕುಡಿಯುವ ನೀರಿನ ಯೋಜನೆ

821 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?